ಪದ್ಯಪಲ್ಲವ



ರಾಜೇಂದ್ರ ಚೆನ್ನಿ

# ಕಾಲಡಿಯಲಿರುವ ಕುಂಬಳಕ್ಕೆ ಕುರುಡಾದರೆ...



ಆಧುನಿಕ ಕನ್ನಡ ಕಾವ್ಯದ ಮೊದಲ ಹಂತದ ಮಹತ್ವದ ಕವಿಯಾದ ಪಂಜೆ ಮಂಗೇಶರಾಯರು ಬರೆದ 'ಹೊಲೆಯನ ಹಾಡು' ಪದ್ಯವು ಅನೇಕ ಕಾರಣಗಳಿಗಾಗಿ ಇಂದಿಗೂ ಅಚ್ಚರಿ ಹುಟ್ಟಿಸುತ್ತದೆ. 'ಕವಿಶಿಷ್ಯ' ಎಂಬ ಕಾವ್ಯನಾಮದಲ್ಲಿ ಅವರು ಬರೆದ ಈ ಪದ್ಯವು ಸಂಕೀರ್ಣ ವಿಷಯ ಹೊತ್ತು ಸರಳ ರೀತಿಯಲ್ಲಿ ರಚನೆಯಾಗಿದೆ. ಪ್ರಾಯಶಃ ರಾಘವಾಂಕನ 'ಹರಿಶ್ಚಂದ್ರ ಚರಿತೆ'ಯ ಹೊಲತಿಯರ ಉಲ್ಲೇಖ ಮತ್ತು ಅನೇಕ ವಚನಕಾರರನ್ನು ಬಿಟ್ಟರೆ ದಲಿತ ದನಿಯೊಂದು ಸ್ಪಷ್ಟವಾಗಿ ಕೇಳಿಬಂದದ್ದು ಈ ಪದ್ಯದಲ್ಲಿಯೇ. ಇದು ದಲಿತನೊಬ್ಬನ ದನಿ ಎಂದರೆ ಅದು ಕೇವಲ ಜಾತಿ ಸೂಚಕವಲ್ಲ. ಹಾಗೆ ಸ್ವಂತಿಕೆ ಇಲ್ಲದ ಅಥವಾ ದಲಿತ ಪ್ರಜ್ಞೆಯ ಸೋಂಕೂ ಇಲ್ಲದ ದಲಿತ ವ್ಯಕ್ತಿಗಳ ನೆರಳುಗಳನ್ನು ಅಲ್ಲಲ್ಲಿ ಹುಡುಕಬಹುದೇನೋ. ಈ ಪದ್ಯದಲ್ಲಿ 'ಹೊಲೆಯ' ತನ್ನನ್ನು ಖಚಿತವಾಗಿ ಜಾತಿ ಹಾಗೂ ವರ್ಗಗಳ ಶ್ರೇಣಿಯಲ್ಲಿ 'ಅನ್ಯ'ನೆಂದು ಗುರುತಿಸಿಕೊಳ್ಳುತ್ತಾನೆ. ಅಲ್ಲದೆ ಹೀಗೆ ತನ್ನನ್ನು 'ಅನ್ಯ'ನನ್ನಾಗಿಸಿದ ಸಾಮಾಜೀಕರಣವನ್ನು ನೇರವಾಗಿ ವಿವರಿಸಿ ಪ್ರಶ್ನಿಸುತ್ತಾನೆ. ಈ ಪದ್ಯದ ಅನೇಕ ಸಾಲುಗಳು ಪ್ರಶ್ನೆಗಳೇ ಆಗಿವೆ. ಉದ್ಗಾರವಾಚಕವಾದ ಸಾಲುಗಳು ಕೂಡ ನಿಜ ಅರ್ಥದಲ್ಲಿ ಪ್ರಶ್ನೆಗಳೇ ಆಗಿವೆ. ಅವನು ಪ್ರಶ್ನಿಸುತ್ತಿರುವುದು ಅಸ್ಪೃಶ್ಯತೆಯನ್ನು. ಅಸ್ಪಶ್ಯತೆಯೇ ಅಸಮಾನತೆಯ ಬುನಾದಿಯೂ ಆಗಿದೆ ಮತ್ತು ಆಯುಧವೂ ಆಗಿದೆ ಎನ್ನುವ ಅರಿವು ಅವನಿಗಿದೆ.

ತಿಗಣೆ, ಹಂದಿ, ನಾಯಿ, ಬೆಕ್ಕು ಇವೆಲ್ಲವೂ ಸ್ಪರ್ಶವಾಗಿರುವುದಾದರೆ ತಾನೇಕೆ ಅಲ್ಲ ಎನ್ನುವುದೇ ಮೂಲ ಪ್ರಶ್ನೆಯಾಗಿದೆ. ಪದ್ಯ ಶುರುವಾಗುವುದೇ ತನ್ನನ್ನು ಅನ್ಯನೆಂದು ಅಸ್ಪೃಶ್ಯನೆಂದು ಮಾತ್ರ ಗುರುತಿಸುವ 'ಉಳ್ಳಯ್ಯ'ನನ್ನು ಸಂಬೋಧಿಸುವ ಮೂಲಕ. ನಾನು 'ಉಳ್ಳಯ್ಯ' ಎನ್ನುವುದನ್ನು ಉಳ್ಳವನು ಎಂದು ಅರ್ಥ ಮಾಡಿಕೊಂಡಿದ್ದೇನೆ.